**ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ಬೆಂಗಳೂರು ಇವರ ಕಛೇರಿಯ ನಡವಳಿಗಳು**

ವಿಷಯ: ಇಲಾಖೆಯ ಅಧಿಕಾರಿ/ಸಿಬ್ಬಂದಿ ಗಳಿಗೆ ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ ಮಂಜೂರಾತಿ ಬಗ್ಗೆ.

ಉಲ್ಲೇಖ: 1. ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಂದ ಬಂದಿರುವ ಮನವಿ ಪತ್ರ.

2. ಸರ್ಕಾರಿ ಆದೇಶ ಸಂಖ್ಯೆ: ಆಇ 02 ಮೋವಾಮು 2017, ದಿ:07-08-2017.

****

ಪ್ರಸ್ತಾವನೆ:

ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಮೋಟಾರು ಸೈಕಲ್/ಸ್ಕೂಟರ್ ಖರೀದಿಸಲು ಉದ್ದೇಶಿಸಿದ್ದು, ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡವನ್ನು ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ಪರಿಶೀಲಿಸಲಾಗಿ ಇವರ ಮೂಲ ವೇತನ ರೂ.19500/- ಗಳಿಗಿಂತ ಅಧಿಕವಾಗಿದ್ದು, ತಲಾ ರೂ.50,000/-(ಐವತ್ತು ಸಾವಿರ ಮಾತ್ರ) ಗಳ ಮುಂಗಡವನ್ನು ಪಡೆಯಲು ಅರ್ಹತೆ ಹೊಂದಿರುತ್ತಾರೆ. ಮತ್ತು ಇದೇ ಮೊದಲ ಬಾರಿಗೆ ಈ ಮುಂಗಡಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಆದೇಶ ಕ್ರಮಾಂಕ: ಡಿಟಿಇ 6 ಬಿಯುಡಿ 2017, ದಿನಾಂಕ: 18-8-2017.**

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 218 ರಿಂದ 225 ರವರೆಗಿನ ಉಪಬಂಧಗಳ ಮೇರೆಗೆ ಮತ್ತು ಈ ಆದೇಶದಲ್ಲಿ ಅನ್ವಯಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗೊಳಪಟ್ಟು ಈ ಕೆಳಕಂಡ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ ತಲಾ ರೂ.50,000/- ಗಳನ್ನು ಮಂಜೂರು ಮಾಡಲಾಗಿದೆ.

| ಕ್ರ ಸಂ | ಅಧಿಕಾರಿ/ಸಿಬ್ಬಂದಿ ಹೆಸರು, ಪದನಾಮ, ಸಂಸ್ಥೆಯ ಹೆಸರು. ಶ್ರೀಯುತರಾದ | ಮಂಜೂರು ಮಾಡಲಾದ ಮುಂಗಡ ರೂ. | ಅಸಲು ವಸೂಲಾತಿ ಮೊತ್ತ ಮತ್ತು ವಸೂಲಾತಿ ಕಂತುಗಳು | ಮುಂಗಡಕ್ಕೆ ತಗಲುವ ಬಡ್ಡಿ (11.5%) ಮೊತ್ತ ಮತ್ತು ಕಂತುಗಳು |
|---|---|---|---|---|
| 1 | ಹರ್ಷ ಹರಪ್ಪನಹಳ್ಳಿ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 2 | ಪುಷ್ಪಲತ, ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 3 | ಷರ್ಮಾಸ್ ವಲಿ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 4 | ಉಮಾ ಇ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 5 | ಮಹೇಶ್ವರಪ್ಪ ಎಂ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |

| | | | | |
|---|---|---|---|---|
| 6 | ಅಶೋಕ ಡಿ.ಎಲ್ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |
| 7 | ಸಿದ್ದಲಿಂಗೇಶ ಜಿ.ಆರ್ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 8 | ನಾಗರಾಜ .ಕೆ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |
| 9 | ಲೋಕೇಶ್.ಜಿ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1667/- ಗಳಂತೆ 30 ಕಂತುಗಳು | ರೂ.619/- ಗಳಂತೆ 12 ಕಂತುಗಳು |
| 10 | ಜಗದೀಶ ಎಂ. ಸಿ. ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |
| 11 | ಮಲ್ಲಿಕಾರ್ಜುನ ಕೆ. ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |
| 12 | ಉಂಡಿ ಸಿದ್ಧೇಶ್, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಕೂಡ್ಲಿಗಿ. | 50,000/- | ರೂ.1389/- ಗಳಂತೆ 36 ಕಂತುಗಳು | ರೂ.739/- ಗಳಂತೆ 12 ಕಂತುಗಳು |
| 13 | ಶ್ರೀಧರ್ ಸಿ.ಜೆ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್ ಹರಪ್ಪನಹಳ್ಳಿ | 50,000/- | ರೂ.834/- ಗಳಂತೆ 60 ಕಂತುಗಳು | ರೂ.1218/- ಗಳಂತೆ 12 ಕಂತುಗಳು |

**ಷರತ್ತು ಮತ್ತು ನಿಬಂಧನೆಗಳು**

1) ಮೇಲ್ಕಂಡ ಮುಂಗಡ ಮೊತ್ತವನ್ನು 2017-18ನೇ ಸಾಲಿನ ಲೆಕ್ಕ ಶೀರ್ಷಿಕೆ 7610-00-202-0-01-393 (ಯೋಜನೇತರ) ದಲ್ಲಿ ಭರಿಸತಕ್ಕದ್ದು.

2) ಮುಂಗಡ ಪಡೆದ ಅರ್ಜಿದಾರರಿಂದ ಕರ್ನಾಟಕ ಆರ್ಥಿಕ ಸಂಹಿತೆ 1958 ರ ಪ್ರಪತ್ರ 45 ರಲ್ಲಿ ಒಪ್ಪಂದ ಪತ್ರವನ್ನು ಪಡೆಯತಕ್ಕದ್ದು.

3) ಅರ್ಜಿದಾರರು ಮುಂಗಡ ಪಡೆದು ಖರೀದಿಸಿದ ವಾಹನವನ್ನು ಕರ್ನಾಟಕ ಆರ್ಥಿಕ ಸಂಹಿತೆಯ 1958 ರ ಪ್ರಪತ್ರ 43 ರಲ್ಲಿ ಮುಂಗಡ ಪಡೆದ ಒಂದು ತಿಂಗಳೊಳಗೆ ಕರ್ನಾಟಕ ಸರ್ಕಾರಕ್ಕೆ ಅಡಮಾನ ಮಾಡಬೇಕು.

4) ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲಿ ವಾಹನ ವ್ಯಾಪಕ ನಷ್ಟ ರಕ್ಷಣೆಯ ವಿಮೆ ಮಾಡಿಸಬೇಕು.

5) ಮಂಜೂರಾದ ಮುಂಗಡ ಮೊತ್ತದ ಬಿಲ್ಲನ್ನು ಮೇಲು ಸಹಿಗಾಗಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಯ ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು.

6) ಸದರಿ ಮುಂಗಡಕ್ಕೆ ಸಾಮಾನ್ಯ ಬಡ್ಡಿ ವಾರ್ಷಿಕ ಶೇ.11.5% ರಂತೆ ವಿಧಿಸಲಾಗುವುದು. ದಂಡ ರೂಪದ ಬಡ್ಡಿಯನ್ನು ಸಾಮಾನ್ಯ ಬಡ್ಡಿ ದರ ಜೊತೆಗೆ ಹೆಚ್ಚುವರಿಯಾಗಿ ಶೇ.4% ರಂತೆ ವಿಧಿಸಲಾಗುವುದು.

7) ಮುಂಗಡದ ಕಂತುಗಳನ್ನು ಮುಂಗಡ ನೀಡಿದ ತರುವಾಯ ಪಾವತಿಸಲಾಗುವ ಮೊದಲ ವೇತನದಿಂದ ಕಟಾವಣೆ ಮಡುವುದು.

8) ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಮುಂಗಡ ಹಣದ ವಸೂಲಾತಿ ಬಗ್ಗೆ ನಿಗಾ ಇಡಬೇಕಾದ ಹಾಗೂ ವಿವರವಾದ ಲೆಕ್ಕಗಳನ್ನು ನಿರ್ವಹಿಸಬೇಕಾದ ಜವಾಬ್ದಾರಿಯುಳ್ಳ ಅಧಿಕಾರಿಯಾಗಿರುತ್ತಾರೆ.

9) ಮಂಜೂರಾತಿಯ ತರುವಾಯ ಪಡೆದ ಮೊತ್ತವನ್ನು ಒಂದು ತಿಂಗಳೊಳಗಾಗಿ ಬಳಸಿಕೊಳ್ಳಬೇಕು ಮತ್ತು ಖರ್ಚಾಗದೇ ಬಾಕಿ ಉಳಿದಿರುವ ಮೊತ್ತ ಯಾವುದಾದರೂ ಇದ್ದರೆ ಅದನ್ನು ದಿನಾಂಕ:31.03.2018 ರೊಳಗೆ ಸರ್ಕಾರಕ್ಕೆ ಹಿಂತಿರುಗಿಸಬೇಕು.

10) ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ ಮಂಜೂರಾತಿಯನ್ನು ಪಡೆದ ಅಧಿಕಾರಿ/ಸಿಬ್ಬಂದಿಗಳ ಒಟ್ಟು ಮುಂಗಡ ಬಡ್ಡಿ ಸಹಿತ ಒಂದೇ ಕಂತಿನಲ್ಲಿ ಮರು ಪಾವತಿ ಮಾಡಲು ಬದ್ಧರಾಗಿರುತ್ತಾರೆ. ಮತ್ತು ಶಿಸ್ತಿನ ಕ್ರಮವನ್ನು ಸಹ ಎದುರಿಸಬೇಕಾಗುತ್ತದೆ.

11) ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಮುಂಗಡ ಮಂಜೂರಾತಿಯ ಪೂರ್ಣ ವಿವರಗಳನ್ನು ಸಂಬಂಧಪಟ್ಟ ಫಲಾನುಭವಿಗಳ ಸೇವಾ ಪುಸ್ತಕದಲ್ಲಿ ತಪ್ಪದೇ ನಮೂದಿಸತಕ್ಕದ್ದು.

12) ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಕೆಳಕಂಡ ದಸ್ತಾವೇಜುಗಳನ್ನು ತಪ್ಪದೇ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು.

ಅ) ಮುಂಗಡ ಮೊತ್ತ ಸಂದಾಯ ಮಾಡಿದ ರಶೀದಿ/ವಿತರಣಾ ಪಟ್ಟಿ (ದೃಢೀಕೃತ ಪ್ರತಿ)
ಆ) ಕರ್ನಾಟಕ ಆರ್ಥಿಕ ಸಂಹಿತೆ 1958 ರ ಪ್ರಪತ್ರ 45 ರ ಒಪ್ಪಂದ ಪತ್ರ, (ಮೂಲ ಪ್ರತಿ)
ಇ) ಕರ್ನಾಟಕ ಆರ್ಥಿಕ ಸಂಹಿತೆ 1958 ರ ಪ್ರಪತ್ರ 43 ರ ಅಡಮಾನ ಪತ್ರ, (ಮೂಲ ಪ್ರತಿ)
ಈ) ಪರವಾನಿಗೆ ಮತ್ತು ಆರ್.ಸಿ. ಪುಸ್ತಕದ (ದೃಢೀಕೃತ ಪ್ರತಿ)
ಉ) ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲಿ ವಾಹನ ವ್ಯಾಪಕ ನಷ್ಟ ರಕ್ಷಣೆಯ ವಿಮೆ (ದೃಢೀಕೃತ ಪ್ರತಿ)
ಊ) ಮೋಟಾರು ಸೈಕಲ್/ಸ್ಕೂಟರ್ ಖರೀದಿಸಿದ ಹಣ ಸಂದಾಯ ರಸೀದಿ (ಮೂಲ ಪತ್ರಿ)
ಋ) ಅರ್ಜಿದಾರನ ವೇತನದಿಂದ ಮುಂಗಡದ ಪ್ರಥಮ ಕಂತು ಕಟಾಯಿಸಿರುವ ಬಗ್ಗೆ (ದೃಢೀಕೃತ ಪತ್ರಿ) ಇತ್ಯಾದಿ.

ನಿರ್ದೇಶಕರು.

ಇವರಿಗೆ,
ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ,

ಪ್ರತಿಗಳು:

1.ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2.ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
3.ಸಂಬಂಧಪಟ್ಟ ಜಿಲ್ಲಾ/ ಉಪ ಖಜಾನೆ ಅಧಿಕಾರಿಗಳು.
4.ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
5.ಸಂಯೋಜಕರು- ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ರವರಿಗೆ- ಇಲಾಖಾ ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡುವ ಸಲುವಾಗಿ.

**ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ಬೆಂಗಳೂರು. ಇವರ ಕಛೇರಿಯ ನಡವಳಿಗಳು**

ವಿಷಯ:-ಇಲಾಖೆಯ ಅಧಿಕಾರಿ/ಸಿಬ್ಬಂದಿ ಗಳಿಗೆ ಗಣಕಯಂತ್ರ ಖರೀದಿ ಮುಂಗಡ ಮಂಜೂರಾತಿ ಬಗ್ಗೆ.

ಉಲ್ಲೇಖ:- 1. ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಂದ ಬಂದಿರುವ ಮನವಿ ಪತ್ರ.
2. ಸರ್ಕಾರಿ ಆದೇಶ ಸಂಖ್ಯೆ: ಆಇ 10 ಮಕಮು 2017
ದಿನಾಂಕ:08-08-2017.

ಪ್ರಸ್ತಾವನೆ:

ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಗಣಕಯಂತ್ರ ಖರೀದಿಸಲು ಉದ್ದೇಶಿಸಿದ್ದು, ಗಣಕಯಂತ್ರ ಖರೀದಿ ಮುಂಗಡವನ್ನು ಕೋರಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ಪರಿಶೀಲಿಸಲಾಗಿ ಇವರ ಮೂಲ ವೇತನ ರೂ.22,200/-ಗಳಿಗಿಂತ ಅಧಿಕವಾಗಿದ್ದು, ತಲಾ ರೂ.40,000/-(ನಲವತ್ತು ಸಾವಿರಗಳು ಮಾತ್ರ) ಗಳ ಗಣಕಯಂತ್ರ ಖರೀದಿ ಮುಂಗಡವನ್ನು ಪಡೆಯಲು ಅರ್ಹತೆ ಹೊಂದಿರುತ್ತಾರೆ. ಮತ್ತು ಇದೇ ಮೊದಲ ಬಾರಿಗೆ ಈ ಮುಂಗಡಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಆದೇಶ ಕ್ರಮಾಂಕ: ಡಿಟಿಇ 7 ಬಿಯುಡಿ 2017, ದಿನಾಂಕ: 21.08.2017**

ಕರ್ನಾಟಕ ಆರ್ಥಿಕ ಸಂಹಿತೆ 1958 ರಲ್ಲಿ ವಿಧಿಸಿರುವ ಬಡ್ಡಿಯುಳ್ಳ ಮುಂಗಡಕ್ಕೆ ಅನ್ವಯಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗೊಳಪಟ್ಟು ಈ ಕೆಳಕಂಡ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಅವರ ಹೆಸರಿನ ನಮೂದಿಸಿರುವ ಗಣಕಯಂತ್ರ ಖರೀದಿ ಮುಂಗಡ ಮಂಜೂರು ಮಾಡಲಾಗಿದೆ.

| ಕ್ರ ಸಂ | ಅಧಿಕಾರಿ/ಸಿಬ್ಬಂದಿ ಹೆಸರು, ಪದನಾಮ,ಸಂಸ್ಥೆಯ ಹೆಸರು. ಶ್ರೀಯುತರಾದ | ಮಂಜೂರು ಮಾಡಲಾದ ಮುಂಗಡ ರೂ. | ಅಸಲು ವಸೂಲಾತಿ ಮೊತ್ತ ಮತ್ತು ವಸೂಲಾತಿ ಕಂತುಗಳು | ಮುಂಗಡಕ್ಕೆ ತಗಲುವ ಬಡ್ಡಿ (8.5%) ಮೊತ್ತ ಮತ್ತು ಕಂತುಗಳು |
|---|---|---|---|---|
| 1 | ಉಮಾ ಈ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 2 | ಮಲ್ಲಿಕಾರ್ಜುನ ಕೆ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 3 | ಉಂಡಿಸಿದ್ಧೇಶ್, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 4 | ಜಗದೀಶ ಎಂ. ಸಿ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 5 | ಅಶೋಕ ಡಿ.ಎಲ್, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 6 | ಸಿದ್ಧಲಿಂಗೇಶ್ ಜಿ.ಆರ್. ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 7 | ಪುಷ್ಪಲತಾ ಕರಡಿ , ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1112/-ಗಳಂತೆ 36 ಕಂತುಗಳು | ರೂ.188/- ಗಳಂತೆ 28 ಕಂತುಗಳು |
| 8 | ನಾಗರಾಜ ಕೆ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1112/- ಗಳಂತೆ 36 ಕಂತುಗಳು | ರೂ.188/- ಗಳಂತೆ 28 ಕಂತುಗಳು |

| | | | | |
|---|---|---|---|---|
| 9 | ಲೋಕೇಶ ಜಿ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 10 | ಹರಪನಹಳ್ಳಿ .ಹರ್ಷ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 11 | ಷರ್ಮಾನ್ ವಲಿ. ಎಸ್. ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1334/- ಗಳಂತೆ 30 ಕಂತುಗಳು | ರೂ.157/- ಗಳಂತೆ 28 ಕಂತುಗಳು |
| 12 | ಮಹೇಶ್ವರಪ್ಪ . ಎಂ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್,ಕೂಡ್ಲಗಿ | 40,000/- | ರೂ.1112/- ಗಳಂತೆ 36 ಕಂತುಗಳು | ರೂ.188/- ಗಳಂತೆ 28 ಕಂತುಗಳು |
| 13 | ಸುಜಾತ ಹೆಚ್, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ | 40,000/- | ರೂ.667/- ಗಳಂತೆ 60 ಕಂತುಗಳು | ರೂ.309/- ಗಳಂತೆ 28 ಕಂತುಗಳು |
| 14 | ಆದರ್ಶ ಕೆ.ಎಸ್, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ | 40,000/- | ರೂ.667/- ಗಳಂತೆ 60 ಕಂತುಗಳು | ರೂ.309/- ಗಳಂತೆ 28 ಕಂತುಗಳು |
| 15 | ಮೀನಾಕ್ಷಿ, ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ | 40,000/- | ರೂ.667/- ಗಳಂತೆ 60 ಕಂತುಗಳು | ರೂ.309/- ಗಳಂತೆ 28 ಕಂತುಗಳು |
| 16 | ವಿಜಯಾಶ್ರೀ ಎಸ್, ಅಧೀಕ್ಷಕರು ಸರ್ಕಾರಿ ಪಾಲಿಟೆಕ್ನಿಕ್, ಹಾಸನ | 40,000/- | ರೂ.1000/- ಗಳಂತೆ 40 ಕಂತುಗಳು | ರೂ.208/- ಗಳಂತೆ 28 ಕಂತುಗಳು |

ಷರತ್ತು ಮತ್ತು ನಿಬಂಧನೆಗಳು:

1) ಮೇಲ್ಕಂಡ ಮುಂಗಡ ಮೊತ್ತವನ್ನು ಲೆಕ್ಕ ಶೀರ್ಷಿಕೆ 7610-00-204-0-01-393 (ಯೋಜನೇತರ) ದಲ್ಲಿ ಭರಿಸತಕ್ಕದ್ದು.

2) ಮುಂಗಡ ಪಡೆದ ಅರ್ಜಿದಾರರಿಂದ ಕರ್ನಾಟಕ ಆರ್ಥಿಕ ಸಂಹಿತೆ 1958 ರ ಪ್ರಪತ್ರ 45 ರಲ್ಲಿ ಒಪ್ಪಂದ ಪತ್ರವನ್ನು ಪಡೆಯತಕ್ಕದ್ದು.

3)ಮುಂಗಡ ಪಡೆದ ಅರ್ಜಿದಾರರಿಂದ ಅಗತ್ಯ ಕರಾರು ಪತ್ರಗಳನ್ನು ಪಡೆದು ಬಿಲ್ಲನ್ನು ಮೇಲುಸಹಿಗಾಗಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಯ ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು.

4) ಸದರಿ ಮುಂಗಡಕ್ಕೆ ಸಾಮಾನ್ಯ ಬಡ್ಡಿ ವಾರ್ಷಿಕ ಶೇ.8.5% ರಂತೆ ವಿಧಿಸಲಾಗುವುದು. ದಂಡ ರೂಪದ ಬಡ್ಡಿಯನ್ನು ಸಾಮಾನ್ಯ ಬಡ್ಡಿ ದರ ಜೊತೆಗೆ ಹೆಚ್ಚುವರಿಯಾಗಿ ಶೇ.4% ರಂತೆ ವಿಧಿಸಲಾಗುವುದು.

5) ಮುಂಗಡದ ಕಂತುಗಳನ್ನು ಮುಂಗಡ ನೀಡಿದ ತರುವಾಯ ಪಾವತಿಸಲಾಗುವ ಮೊದಲ ವೇತನದಿಂದ ಕಟಾವಣೆ ಮಾಡುವುದು.

6) ಸಂಸ್ಥೆಯ ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಮುಂಗಡ ಹಣದ ವಸೂಲಾತಿ ಬಗ್ಗೆ ನಿಗಾ ಇಡಬೇಕಾದ ಹಾಗೂ ವಿವರವಾದ ಲೆಕ್ಕಗಳನ್ನು ನಿರ್ವಹಿಸಬೇಕಾದ ಜವಾಬ್ದಾರಿಯುಳ್ಳ ಅಧಿಕಾರಿಯಾಗಿರುತ್ತಾರೆ.

7) ಮಂಜೂರಾತಿಯು ತರುವಾಯ ಪಡೆದ ಮೊತ್ತವನ್ನು ಒಂದು ತಿಂಗಳೊಳಗಾಗಿ ಬಳಸಿಕೊಳ್ಳಬೇಕು ಮತ್ತು ಖರ್ಚಾಗದೇ ಬಾಕಿ ಉಳಿದಿರುವ ಮೊತ್ತ ಯಾವುದಾದರೂ ಇದ್ದರೆ ಅದನ್ನು ದಿನಾಂಕ:31.03.2018 ರೊಳಗೆ ಸರ್ಕಾರಕ್ಕೆ ಹಿಂತಿರುಗಿಸಬೇಕು. ಮುಂಗಡ ಸೌಲಭ್ಯ ಪಡೆಯುವ ಅಧಿಕಾರಿಯ/ಸಿಬ್ಬಂದಿಯು ಸರ್ಕಾರದ ಆದೇಶ ಸಂ.ಆ.ಇ/8/ಮುಕಮು/94, ದಿನಾಂಕ: 21/10/94ರ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವ ಪ್ರಮಾಣ ಪತ್ರದಲ್ಲಿ ವಿವರಗಳನ್ನು ಒದಗಿಸತಕ್ಕದ್ದು.

8) ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಗಣಕಯಂತ್ರ ಖರೀದಿ ಮುಂಗಡ ಮಂಜೂರಾತಿಯನ್ನು ಪಡೆದ ಅಧಿಕಾರಿ/ಸಿಬ್ಬಂದಿಗಳ ಒಟ್ಟು ಮುಂಗಡ ಬಡ್ಡಿ ಸಹಿತ ಒಂದೇ ಕಂತಿನಲ್ಲಿ ಮರು ಪಾವತಿ ಮಾಡಲು ಬದ್ಧರಾಗಿರುತ್ತಾರೆ. ಮತ್ತು ಶಿಸ್ತಿನ ಕ್ರಮವನ್ನು ಸಹ ಎದುರಿಸಬೇಕಾಗುತ್ತದೆ.

9) ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಮುಂಗಡ ಮಂಜೂರಾತಿಯ ಪೂರ್ಣ ವಿವರಗಳನ್ನು ಸಂಬಂಧಪಟ್ಟ ಫಲಾನುಭವಿಗಳ ಸೇವಾ ಪುಸ್ತಕದಲ್ಲಿ ತಪ್ಪದೇ ನಮೂದಿಸತಕ್ಕದ್ದು..

10) ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯು ಗಣಕಯಂತ್ರ ಖರೀದಿ ಮುಂಗಡಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸತಕ್ಕದ್ದು ಹಾಗೂ ಕೆಳಕಂಡ ದಸ್ತಾವೇಜುಗಳನ್ನು ತಪ್ಪದೇ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು.

ಅ) ಮುಂಗಡ ಮೊತ್ತ ಸಂದಾಯ ಮಾಡಿದ ರಶೀದಿ/ವಿತರಣಾ ಪಟ್ಟಿ (ದೃಢೀಕೃತ ಪ್ರತಿ)

ಆ) ಕರ್ನಾಟಕ ಆರ್ಥಿಕ ಸಂಹಿತೆ 1958 ರ ಪ್ರಪತ್ರ 45 ರ ಒಪ್ಪಂದ ಪತ್ರ, (ಮೂಲ ಪ್ರತಿ)

ಇ) ಗಣಕಯಂತ್ರ ಖರೀದಿಸಿದ ಹಣ ಸಂದಾಯ ರಸೀದಿ (ಮೂಲ ಪತ್ರಿ)

ಈ) ಸರ್ಕಾರದ ಆದೇಶ ಸಂಖ್ಯೆ ಆಇ/06/ಅಕಮು/2012, ದಿನಾಂಕ: 18/5/2012ರ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿನ ಪ್ರಮಾಣ ಪತ್ರ (ಮೂಲ ಪ್ರತಿ)

ಉ) ಅರ್ಜಿದಾರನ ವೇತನದಿಂದ ಮುಂಗಡದ ಪ್ರಥಮ ಕಂತು ಕಟಾಯಿಸಿರುವ ಬಗ್ಗೆ (ದೃಢೀಕೃತ ಪತ್ರಿ) ಇತ್ಯಾದಿ.

ನಿರ್ದೇಶಕರು.

ಇವರಿಗೆ,
ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ,

ಪ್ರತಿಗಳು:

1.ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2.ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
3.ಸಂಬಂಧಪಟ್ಟ ಜಿಲ್ಲಾ/ ಉಪ ಖಜಾನೆ ಅಧಿಕಾರಿಗಳು.
4.ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್/ ಇಂಜಿನಿಯರಿಂಗ್ ಕಾಲೇಜು/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
5.ಸಂಯೋಜಕರು- ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ರವರಿಗೆ- ಇಲಾಖಾ ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡುವ ಸಲುವಾಗಿ